

ಸಣ್ಣವಯಸ್ಸಿನಲ್ಲೇ 11 ಕವನ ಸಂಕಲನಗಳನ್ನು ಪ್ರಕಟಿಸಿ, ಓದುಗವಿಮರ್ಶಕರ ಮೆಚ್ಚುಗೆಗೆ ಪಾತ್ರರಾಗಿರುವ ಅನಿಲಾ ಬುಖ್ಹಾರಿ (14 ನೇ ಡಿಸೆಂಬರ್ 2003) ಪಾಕಿಸ್ತಾನದ ಪಂಜಾಬ್ ಪ್ರಾಂತದ ಗುಜ್ರನ್ವಾಲ ಶಹರದವರು. ಭರವಸೆಯ ಕವಿ ಮತ್ತು ಆ್ಯಕ್ಟಿವಿಸ್ಟ್. ಬಾಲ್ಯ ವಿವಾಹಕ್ಕೆ ಅಂತ್ಯ ಹಾಡಲು ಕೇವಲ 17 ನೇ ವಯಸ್ಸಿನಲ್ಲಿ 'No more bride.. just shine' ಎಂಬ ಘೋಷಣೆಯೊಂದಿಗೆ 'Hopeful Hugs' ಎಂಬ ಅಭಿಯಾನ ಆರಂಭಿಸಿದರು. ಈ ಕುರಿತು ವೆಬಿನಾರ್ ಚರ್ಚೆ, ಕವಿಗೋಷ್ಠಿ ಹಾಗೂ ಪ್ರಬಂಧ ಸ್ಪರ್ಧೆ ಆಯೋಜಿಸಿದರಲ್ಲದೇ,ಈ ತನಕ 15 ದೇಶಗಳ ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಿರುವುದು ವಿಶೇಷ.

ಇವರು ಬರೆದ 'No more tears' ಎಂಬ ಕವನ ಸಂಕಲನವು ಪ್ರತಿಕೂಲ ಪರಿಸ್ಥಿತಿಯಲ್ಲೂ ಕೈ ಹಿಡಿದು ನಡೆಸುವ ಭರವಸೆ ಮತ್ತು ಬದುಕಿನಲಿ ಪುಟಿದೇಳುವಂತಹ ವಸ್ತು ವಿಷಯಗಳನ್ನು ಒಳಗೊಂಡಿದೆ.ಇತ್ತೀಚಿನ ಕವನ ಸಂಗ್ರಹ ‘whisper of the heart’ ಸಾಮಾಜಿಕ ನ್ಯಾಯ ಮತ್ತು ಮಾನವ ಹಕ್ಕುಗಳ ಸಮಸ್ಯೆಗಳ ಕುರಿತು ಮಾತನಾಡುತ್ತದೆ.'Daughters not a curse' ತೃತೀಯ ಜಗತ್ತಿನ ಹೆಣ್ಣು ಮಕ್ಕಳ ಸ್ಥಿತಿಗತಿ ಕುರಿತು ಹೇಳುತ್ತದೆ.

ಖಚಿತವಾದ ಸಾಮಾಜಿಕ ಬದಲಾವಣೆಯ ಗುರಿಯೊಂದಿಗೆ ಬರೆವಣಿಗೆಯಲ್ಲಿ ತೊಡಗಿರುವ ಇವರಿಗೆ,2021ರಲ್ಲಿ ಇಟಲಿ ದೇಶದ 'International Book peace award' ಮತ್ತು ಲಂಡನ್ನಿನ ಹೌಸ್ ಆಫ್ ಪಾರ್ಲಿಮೆಂಟ್‌ನ ವತಿಯಿಂದ 2023ರ ‘International excellence community service award' ಒಲಿದು ಬಂದಿವೆ.ಅಲ್ಲದೇ ಪ್ರಶಸ್ತಿ ಪಡೆದ ಮೊದಲ ಕಿರಿಯ ಪಾಕಿಸ್ತಾನಿ ವ್ಯಕ್ತಿ ಎಂಬ ಕೀರ್ತಿಗೂ ಭಾಜನರಾಗಿದ್ದಾರೆ.ಇವರ ಕವಿತೆಗಳನ್ನು ಅಮೆರಿಕಾದ ಫ್ಲೋರಿಡಾ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ಸದ್ಯ ಕವಿ Pak youth parliament ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.